ಸರ್ಕಾರದವರು ತಪ್ಪಿ ಏನಾದರೂ ಮಾಹಿತಿ ಕೊಟ್ಟಿದ್ದರೆ ನೀವು ಈ ಪತ್ರಿಕೆಯ ಮೇಲೆ ಡಿಫರ್‌ಮೇಷನ್ ಕೇಸ್ ಹಾಕಬಹುದಲ್ಲಾ? ಹಾಕುತ್ತೀರಾ?

ಶ್ರೀ ಎನ್. ಚೆಲುವರಾಯಸ್ವಾಮಿ: 700 ಕೇಂದ್ರ ಸರ್ಕಾರದ ಅಧೀನದಲ್ಲಿರತಕ್ಕಂಥದ್ದು, 608 ರಾಜ್ಯ ಸರ್ಕಾರದ್ದು, ಕೇಂದ್ರ ಸರ್ಕಾರದ್ದಕ್ಕೆ ಪ್ರತ್ಯೇಕವಾದ ಅನುದಾನ ಬರುತ್ತದೆ, ಈ 65 ಲಕ್ಷ ರೂ ನಿಂದ ರಾಜ್ಯ ಸರ್ಕಾರದ ವಶದಲ್ಲಿರತಕ್ಕಂಥದ್ದಕ್ಕೆ ಮಾತ್ರ ಸಂರಕ್ಷಣೆ ಮಾಡಲಿಕ್ಕೆ ಆಗುತ್ತದೆ, ಆದರೂ ಸಹ ಅನುದಾನ ಕಡಿಮೆ ಇದೆ. ಅನುದಾನ ಹೆಚ್ಚು ಇದೆ ಎಂದು ನಾನು ಹೇಳಲಿಕ್ಕೆಚ್ಚಿಸುವುದಿಲ್ಲ,..

ಶ್ರೀ ಶಿವಾನಂದ ಎಸ್ ಪಾಟೀಲ್: ಇಲ್ಲ ನಿಮ್ಮದು 750ಕ್ಕೆ ಬರುತ್ತದೆ.

ಶ್ರೀ ಎನ್. ಚೆಲುವರಾಯ ಸ್ವಾಮಿ: ಇಲ್ಲ 700 ಕೇಂದ್ರ ಸರ್ಕಾರ, ಅದಕ್ಕೆ ಪ್ರತ್ಯೇಕವಾದ ಅನುದಾನ ಬರುತ್ತದೆ..

ಶ್ರೀ ಶಿವಾನಂದ ಎಸ್ ಪಾಟೀಲ್: ಕೇಂದ್ರದ್ದು 608.

ಅಧ್ಯಕ್ಷರು: ಶಿವಾನಂದ ಪಾಟೀಲ್‌ರೆ, ಸಂಬಂಧಪಟ್ಟ ಸಚಿವರು ಇಲ್ಲ, ನಿಮ್ಮ ಪ್ರಶ್ನೆಗೆ ಅಧಿಕಾರಿಗಳು ಏನು ಕೊಟ್ಟಿದ್ದಾರೆ ಅಷ್ಟಕ್ಕೆ ಅವರು ಹೇಳುತ್ತಿದ್ದಾರೆ, ತಾವು ಸಂಬಂಧಪಟ್ಟ ಸಚಿವರ ಜೊತೆ ವ್ಯವಹಾರ ಮಾಡಿಕೊಳ್ಳಿ..

ಶ್ರೀ ಶಿವಾನಂದ ಎಸ್ ಪಾಟೀಲ್: ಇನ್ನೊಂದು ನನ್ನ ಪ್ರಶ್ನೆ ಇದೆ, ಗೋಲಗುಂಬಜ್‌ಗೆ ಸಂಬಂಧಪಟ್ಟ ಹಾಗೆ, ವರ್ಡ್ ಹೇರಿಟೇಜ್‌ನಲ್ಲಿ ಗೋಳಗುಮ್ಮಟವನ್ನು ಸೇರಿಸತಕ್ಕಂಥ ಪ್ರಸ್ತಾವನೆ ಇದೆ, ಅದನ್ನು ಸರ್ಕಾರಕ್ಕೆ ನಾವು ಕೊಟ್ಟಿದ್ದೇವೆ. ಕಳೆದ 5–6 ವರ್ಷಗಳಿಂದ ನಾವು ಕೊಡುತ್ತಿದ್ದೇವೆ. ಸೇರಿಸಲಿಕ್ಕೆ ಆಗಿಲ್ಲ. ನಿಮಗೆ ಏನಾದರೂ ಸೇರಿಸಲಿಕ್ಕೆ ಆಗುತ್ತದೆಯೇ?

ಶ್ರೀ ಎನ್. ಚೆಲುವರಾಯಸ್ವಾಮಿ: ಅದನ್ನು ಪರಿಶೀಲಿಸುತ್ತೇವೆ.

ಶ್ರೀ ಶಿವಾನಂದ ಎಸ್ ಪಾಟೀಲ್: ಪರಿಶೀಲಿಸುತ್ತೇವೆಂದು ಹೇಳಿಬಿಟ್ಟರೆ ಹೇಗೆ?

ಅಧ್ಯಕ್ಷರು: ಅಷ್ಟೇ ಇನ್ನೇನು ಹೇಳುತ್ತಾರೆ?

ಶ್ರೀ ಶಿವಾನಂದ ಎಸ್ ಪಾಟೀಲ್: ಸೇರಸುವವರು ಇವರಲ್ಲ. ನೀವು ಶಿಫಾರಸ್ಸು ಮಾಡಿ.

ಶ್ರೀ ಎನ್. ಚೆಲುವರಾಯಸ್ವಾಮಿ: ಆಯಿತು ಶಿಫಾರಸ್ಸು ಮಾಡೋಣ.

6ನೇ ಪಟ್ಟಿಯಿಂದ ತಡೆ ಹಿಡಿಯಲಾದ ಪ್ರಶ್ನೆಗಳು.

ಯಂಳದೂರು ಟೌನ್ ಪಂಚಾಯತ್ ವ್ಯಾಪ್ತಿಯಲ್ಲಿ

ಬಸ್ ನಿಲ್ದಾಣದಲ್ಲಿನ ಅವ್ಯವಸ್ಥೆ

90 (234): ಶ್ರೀ ಬಾಲರಾಜ್ ಎನ್. (ಕೊಳ್ಳೇಗಾಲ)

ಶ್ರೀ ಎನ್ ಚಲುವರಾಯ ಸ್ವಾಮಿ (ಸಾರಿಗೆ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಯಳಂದೂರು ಟೌನ್ ಪಂಚಾಯತ್ ವ್ಯಾಪ್ತಿಯಲ್ಲಿ ಬಸ್‌ನಿಲ್ದಾಣ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಬಂದಿದ್ದಲ್ಲಿ, ತಾಲ್ಲೂಕು ಕೇಂದ್ರದಲ್ಲಿ ಬಸ್ ನಿಲ್ದಾಣದಲ್ಲಿನ ಶೌಚಾಲಯ ಹಾಗೂ ಇತರೆ ಸೌಲಭ್ಯಗಳ ಅವ್ಯವಸ್ಥೆ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ. ಈ ನಿಟ್ಟಿನಲ್ಲಿ ತುರ್ತು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎನ್ ಚಲುವರಾಯ ಸ್ವಾಮಿ (ಸಾರಿಗೆ ಸಚಿವರು)

ಅ. ಹೌದು.

ಆ. ಚಾಮರಾಜನರ ಜಿಲ್ಲೆಯ ಯಳಂದೂರು ಪಟ್ಟಣವು ರಾಷ್ಟ್ರೀಕೃತವಲ್ಲದ ವಲಯದಲ್ಲಿದ್ದು, ಇಲ್ಲಿನ ಬಹುತೇಕ ಸಾರಿಗೆ ಅವಶ್ಯಕತೆಗಳನ್ನು ಖಾಸಗಿಯವರು ನಿರ್ವಹಿಸುತ್ತಿರುತ್ತಾರೆ. ಪ್ರಸ್ತುತ ಕಾರ್ಯಾಚರಣೆಯಲ್ಲಿರುವ ಖಾಸಗಿ ಬಸ್ ನಿಲ್ದಾಣವು ಟೌನ್ ಪಂಚಾಯಿತಿಗೆ ಸೇರಿರುವುದರಿಂದ ಸಾರಿಗೆ ನಿಗಮದ ವ್ಯಾಪ್ತಿಗೆ ಬರುವುದಿಲ್ಲ. ಪ್ರಸ್ತುತ ಯಳಂದೂರು ಪಟ್ಟಣದ ಮೂಲಕ ಕರ್ನಾಟಕ ರಾಜ್ಯ ರಸ್ತೆ, ಸಾರಿಗೆ ಸಂಸ್ಥೆಯ 17 ಅನುಸೂಚಿಗಳಿಂದ 42 ಟ್ರಿಪ್‌ಗಳನ್ನು ಕಾರ್ಯಾಚರಣೆಗೊಳಿಸಲಾಗುತ್ತಿದೆ. ಸದ್ಯಕ್ಕೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣವನ್ನು ಯಳಂದೂರಿನಲ್ಲಿ ನಿರ್ಮಿಸುವ ಪ್ರಸ್ತಾವನೆ ಇರುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಮಾನ್ಯ ಚೆಲುವರಾಯಸ್ವಾಮಿಯವರಿಗೆ ಇಂಥ ಜಾಕ್‌ಪಾಟ್ ಯಾವತ್ತೂ ಕೂ ಬಂದಿರಲಿಲ್ಲ. ಏಕೆಂದರೆ, ಅವರು ಐದು ಮಂತ್ರಿಗಳ ಪರವಾಗಿ ಇವತ್ತು ಉತ್ತರ ಕೊಟ್ಟರು. ಈ ರೀತಿಯಾದ ಒಂದು ವ್ಯವಸ್ಥೆಯಾದರೆ ನಿಜಕ್ಕೂ ನಮ್ಮ ರಾಜ್ಯ ಒಂದು ಆದರ್ಶವೆಂದು ತಿಳಿದುಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು: ಕೆಲವು ಮಂತ್ರಿಗಳು ದೆಹಲಿಗೆ ಹೋಗಿದ್ದಾರೆ. ಆದ್ದರಿಂದ ಅವರ ಪರವಾಗಿ ಇವರು ಉತ್ತರ ಹೇಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ದೆಹಲಿಗೆ ಯಾರ್ಯಾರು ಹೋಗಿದ್ದಾರೆಂದು ತಾವು ಹೇಳಬೇಕು. ನಿಜವಾಗಿಯೂ ನಮಗೆ ಇದು ಅರ್ಥವಾಗುತ್ತಿಲ್ಲ.

ಅಧ್ಯಕ್ಷರು: ಕೆಲವು ಸಾರಿ ಈ ರೀತಿಯಾಗುತ್ತದೆ. ಅವರು ಇಲ್ಲದೇ ಇರುವುದರಿಂದ ಅವರ ಪರವಾಗಿ ಸರ್ಕಾರದ ಪರವಾಗಿ ಉತ್ತರವನ್ನು ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಮುಖ್ಯಮಂತ್ರಿಗಳು ದೆಹಲಿಗೆ ಹೋಗಿದ್ದಾರೆ. ಆದರೆ, ಉಪಮುಖ್ಯಮಂತ್ರಿಗಳು ಬೆಳಿಗ್ಗೆ ಇಲ್ಲಿ ಮುಖ ತೋರಿಸಿದರು. ಆದರೆ, ಈಗ ಎಲ್ಲಿಗೆ ಹೋಗಿದ್ದಾರೆಂಬುದು ಗೊತ್ತಿಲ್ಲ. ಇವರು ಈಗಾಗಲೇ ಐದು ಇಲಾಖೆಗೆ ಸಂಬಂಧಪಟ್ಟಂತೆ ಉತ್ತರ ಕೊಟ್ಟಿದ್ದಾರೆ. ಇನ್ನು ಎಷ್ಟು ಇಲಾಖೆಗೆ ಸಂಬಂಧಪಟ್ಟಂತೆ ಉತ್ತರ ಕೊಡುತ್ತಾರೆಂಬುದು ಗೊತ್ತಿಲ್ಲ.

ಅಧ್ಯಕ್ಷರು: ಆಯಿತು. ಈಗ ಮಾನ್ಯ ಸಚಿವರು ಉತ್ತರ ಕೊಡಿ.

ಶ್ರೀ ಎನ್. ಚೆಲುವರಾಯಸ್ವಾಮಿ: ತಮ್ಮ ಮೂಲಕ ಮಾನ್ಯ ರಾಜೇಂದ್ರನ್ ರವರಿಗೆ ಧನ್ಯವಾದಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಉತ್ತರ ಹೇಳುವುದಕ್ಕೆ ನಾನೇನೂ ಕಷ್ಟ ಪಡುತ್ತಿಲ್ಲ. ಸಚಿವರು ಬೇರೆ ಬೇರೆ ಕಾರಣಗಳಿಂದ ಹೋಗಿರುವುದರಿಂದ ಉತ್ತರ ಹೇಳುವುದಕ್ಕೆ ಮಾನ್ಯ ಅಧ್ಯಕ್ಷರು ನನಗೆ ಅನುಮತಿ ಕೊಟ್ಟಿದ್ದಾರೆ. ಆದ್ದರಿಂದ ನಾನು ಉತ್ತರ ಹೇಳುತ್ತಿದ್ದೇನೆ.

ಶ್ರೀ ಎನ್. ರಾಜೇಂದ್ರನ್: ನಿಮಗೆ ಕಷ್ಟವಾಗಿದೆ ಎಂದು ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಲಿಲ್ಲ. ನೀವು ಐದು ಇಲಾಖೆಗೆ ಸಂಬಂಧಪಟ್ಟಂತೆ ಉತ್ತರ ಕೊಡತಕ್ಕಂಥದ್ದನ್ನು ನೋಡಿ ನಿಮ್ಮನ್ನು ಅವರು ಅಪ್ರೀಷಿಯೇಟ್ ಮಾಡಿದರು. ನೀವು ಐದು ಇಲಾಖೆಗೆ ಸಂಬಂಧಪಟ್ಟಂತೆ ಉತ್ತರ ಕೊಟ್ಟಿದ್ದೀರಿ. ಆದ್ದರಿಂದ ನಿಮ್ಮ ಕೆಪ್ಯಾಸಿಟಿಗೆ ಇನ್ನೂ ಐದು ಇಲಾಖೆಗೆ ಕೊಡಬಹುದೆಂದು ಹೇಳಿದರು.

ಅಧ್ಯಕ್ಷರು: ಆಯಿತು. ತಾವು ಈಗ ನನ್ನ ಗಮನಕ್ಕೆ ತಂದಿದ್ದೀರಿ. ಈಗಾಗಲೇ ಟೈಂ ಆಗಿದೆ. ಮಾನ್ಯ ಬಾಲರಾಜ್‌ರವರೆ, ತಾವು ಪ್ರಸ್ತಾಪ ಮಾಡಿ.

ಶ್ರೀ ಎನ್. ಬಾಲರಾಜ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಆದರೆ, ಇದು ರಾಷ್ಟ್ರೀಕೃತವಲ್ಲದ ಭಾಗವಾಗಿರುವುದರಿಂದ ಇದರ ಬಗ್ಗೆ ಕೂಡ ತಮ್ಮ ತೊಂದರೆ ಏನೆಂದು ತಾವು ತಿಳಿಸಿದ್ದೀರಿ. 17 ಶೆಡ್ಯೂಲ್‌ನಿಂದ ಸುಮಾರು 42 ಟ್ರಿಪ್‌ಗಳು ಬರುತ್ತವೆ. ಆದರೆ, ಇವತ್ತಿನವರೆಗೂ ಅಲ್ಲೊಂದು ಬಸ್ ನಿಲ್ದಾಣವಿಲ್ಲ. ಮಳೆಗಾಲ ಮತ್ತು ಬೇಸಿಗೆ ಕಾಲದಲ್ಲಿ ತುಂಬಾ ಕಷ್ಟವಾಗುತ್ತದೆ. ಆದ್ದರಿಂದ ದಯವಿಟ್ಟು ತಮ್ಮ ಇಲಾಖಾ ವತಿಯಿಂದ ನಮಗೆ ಒಂದು ಬಸ್ ನಿಲ್ದಾಣವನ್ನು ಕಟ್ಟಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಚೆಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ಸಹಜವಾಗಿ ಖಾಸಗಿ ಬಸ್ ಹೆಚ್ಚಿಗೆ ಓಡಾಡುವಂಥ ಆ ಒಂದು ಭಾಗದಲ್ಲಿ ಖಾಸಗಿ ಬಸ್

ನಿಲ್ದಾಣವನ್ನು ಮುನಿಸಿಪಾಲಿಟಿಯರವರು ಅಥವಾ ಸಂಬಂಧಪಟ್ಟಂಥ ಟೌನ್ ಪಂಚಾಯತ್‌ನವರು ಮಾಡತಕ್ಕಂಥದ್ದು ಇದೆ. ಈ ಒಂದು ಕಾರಣದಿಂದ ನಮ್ಮವರು ಅದಕ್ಕೆ ಹೆಚ್ಚಿನ ಗಮನವನ್ನು ಹರಿಸಿಲ್ಲ. ಆದರೆ, ನಮ್ಮ ಸ್ನೇಹಿತರು ಅಲ್ಲಿ ಅತ್ಯಾವಶ್ಯಕವಾಗಿ ಬಸ್‌ನಿಲ್ದಾಣ ಆಗಬೇಕೆಂದು ಹೇಳಿದ್ದಾರೆ. ಆದ್ದರಿಂದ ಇದಕ್ಕೆ ಬೇಕಾಗಿರತಕ್ಕಂಥ ಜಾಗ ಮತ್ತು ಅವರ ಕೈಯಲ್ಲಿ ಆದಷ್ಟು ಅನುದಾನದಲ್ಲಿ ಸ್ವಲ್ಪ ಹಣವನ್ನು ಬಿಡುಗಡೆ ಮಾಡಿಸಿಕೊಡುತ್ತೇನೆಂದು ಅವರು ಇಲ್ಲಿ ಮಾತುಕೊಡುವುದಾದರೆ ಖಂಡಿತ ಅಲ್ಲಿ ಬಸ್ ನಿಲ್ದಾಣವನ್ನು ಮಾಡಿಸಿಕೊಡುತ್ತೇವೆ.

ಶ್ರಿ ಎನ್. ಬಾಲರಾಜ್: ಮಾನ್ಯ ಅಧ್ಯಕ್ಷರೆ, ಜಾಗ ಮತ್ತು ಅನುದಾನವನ್ನೆರಡೂ ಕೊಡುತ್ತೇವೆ. ಆದ್ದರಿಂದ ಈ ಸಾಲಿನಲ್ಲಿಯೇ ಇದನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಆಯಿತು.

(ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳು.

ಶ್ರೀ ಸಿ.ಚೆನ್ನಿಗಪ್ಪ (ಅರಣ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಮಂಗಳವಾರ, ದಿನಾಂಕ 4ನೇ ಏಪ್ರಿಲ್ 2006 (ಮಂಗಳವಾರ ದಿನಾಂಕ 28ನೇ ಮಾರ್ಚ್ 2006ರಂದು ತಡೆಹಿಡಿಯಲಾದ ಪಟ್ಟಿ) 6ನೇ ಪಟ್ಟಿಯ ಸದನದಲ್ಲಿ ಉತ್ತರಿಸುವ 13 ಪ್ರಶ್ನೆಗಳು ಪೈಕಿ 9 ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 103 ಪ್ರಶ್ನೆಗಳ ಪೈಕಿ 99 ಉತ್ತರಗಳನ್ನು ಮತ್ತು 7ನೇ ಪಟ್ಟಿಯ (ಬುಧವಾರ ದಿನಾಂಕ 29ನೇ ಮಾರ್ಚ್ 2006ರಂದು ತಡೆಹಿಡಿಯಲಾದ ಪಟ್ಟಿ) ಲಿಖಿತ ಮೂಲಕ ಉತ್ತರಿಸುವ 75 ಪ್ರಶ್ನೆಗಳ ಪೈಕಿ 72 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

3. ಪ್ರಕಟಣೆ.

ಅಧ್ಯಕ್ಷರು: ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ವಿಧಾನ ಸೌಧದ ಬ್ಯಾಂಕ್ವೆಂಟ್ ಹಾಲ್‌ನಲ್ಲಿ ಭೋಜನ ಕೂಟವನ್ನು ಏರ್ಪಡಿಸಿದ್ದಾರೆ ಹಾಗೂ ತಮಗೆಲ್ಲರಿಗೂ ಆಹ್ವಾನ ನೀಡಿದ್ದಾರೆ. ಆದ್ದರಿಂದ ಎಲ್ಲರೂ ಭಾಗವಹಿಸಿ.

ಶ್ರೀ ಆರ್. ದಿನೇಶ್ ಗುಂಡುರಾವ್: ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ಶೂನ್ಯವೇಳೆಯನ್ನು ಅನಂತರ ತೆಗೆದುಕೊಳ್ಳುತ್ತೇನೆ. ಈಗಾಗಲೇ 1.45 ಗಂಟೆಯಾಗಿದೆ. ಈಗ 2.45 ಗಂಟೆವರೆಗೆ ಮುಂದೂಡಲಾಗಿದೆ.